

ಎದೆಗೊಂದು ಕಿಂಡಿ ಕೊರೆದು ಹೃದಯಕ್ಕೇ ಕೈ ಹಾಕಿ ಅದರ ಸಮಸ್ಯೆಗೆ ಪರಿಹಾರ ಕಂಡುಕೊಂಡ ವೈದ್ಯಲೋಕದ ಆವಿಷ್ಕಾರವೇ ಅದ್ಭುತ. ಎದೆಯ ಎಲುಬುಗಳನ್ನು ಸೀಳಿ ಹೃದಯಕ್ಕೆ ಶಸ್ತ್ರಚಿಕಿತ್ಸೆ ಮಾಡುತ್ತಿದ್ದ ವಿಧಾನ ಸಾಮಾನ್ಯ. ಆದರೆ ಇಲ್ಲಿ ಎದೆಯ ಎಲುಬುಗಳನ್ನು ಸೀಳುವ ಪ್ರಶ್ನೆಯೇ ಇಲ್ಲ. ಎದೆಯ ಎಡಬದಿ ಮೊಲೆಯ ಕೆಳಗೆ ಕೇವಲ ಎರಡು ಅಥವಾ ಎರಡೂವರೆ ಇಂಚಿನ ಕಿಂಡಿ ಕೊರೆದು ಹೃದಯದ ಶಸ್ತ್ರಚಿಕಿತ್ಸೆ ನಡೆಸುವ ಅಪರೂಪದ ವಿಧಾನವೊಂದಿದೆ – ಅದುವೇ 'ಮಿನಿಮಲಿ ಇನ್‌ವೇಸಿವ್ ಕೊರೊನರಿ ಸರ್ಜರಿ'.

ಈ ವಿಧಾನದಿಂದ ಅಧಿಕ ನಾಲ್ಕು ಬ್ಲಾಕೇಜ್‌ಗಳನ್ನು ರಿಪೇರಿ ಮಾಡಬಹುದು. ಸಾವಿರಾರು ಹೃದಯಗಳಿಗೆ ಯಶಸ್ವಿ ಸರ್ಜರಿ ಮಾಡಿದ ನಾಡಿನ ಹೆಮ್ಮೆಯ ಸರ್ಜನ್ ಡಾ. ಸಾತ್ಯಕಿ ನಂಬಳ ನಮ್ಮೆದುರು ಮೂರು ಸಂಪೂರ್ಣ ಬ್ಲಾಕೇಜ್‌ಗಳನ್ನು ರಿಪೇರಿ ಮಾಡಿದರು. ರೋಗಿಯ ಕೈಯಿಂದ ತೆಗೆದುಕೊಂಡ ರಕ್ತನಾಳವನ್ನು ತೊಂದರೆಗೀಡಾದ ಹೃದಯದ ರಕ್ತನಾಳಕ್ಕೆ ಕಸಿ ಮಾಡಿ ಬೈಪಾಸ್ ಮಾರ್ಗ ರೂಪಿಸಿದರು. ಆ ಸರ್ಜರಿಗೆ ಸಾಕ್ಷಿಯಾದ ರೋಮಾಂಚಕ ಅನುಭವ ಕಟ್ಟಿಕೊಡುವ ಪ್ರಾಮಾಣಿಕ ಪ್ರಯತ್ನವಿದು.

★ ★ ★

ಅದೊಂದು ಸಂಜೆ ಗೆಳೆಯ ಅಶೋಕ ರಾಮಚಂದ್ರಪ್ಪ ತಾವು ನಿರ್ವಹಿಸುತ್ತಿದ್ದ ಮೆಡಿಕಲ್ ಈವೆಂಟ್‌ಗೆ ಆಹ್ವಾನಿಸಿದ್ದರು. ವಿಶ್ವಖ್ಯಾತ ಸರ್ಜನ್‌ಗಳ ಸಮಾವೇಶ ಅದಾಗಿತ್ತು. ಆಪರೇಷನ್ ಥಿಯೇಟರ್‌ನಿಂದ ಹೃದಯದ ಸರ್ಜರಿಯ ನೇರ ಪ್ರಾತ್ಯಕ್ಷಿಕೆ ಸಮಾವೇಶದ ಕೇಂದ್ರಬಿಂದುವಾಗಿತ್ತು. ಆ ದಿನ ಹೋಗಲಾಗಲಿಲ್ಲ. ಆ ಸಂಬಂಧದಲ್ಲಿ ಪರಿಚಿತರಾದ ಅಪೊಲೊ ಆಸ್ಪತ್ರೆಯ ಚೀಫ್ ಕ್ಲಿನಿಕಲ್ ಪರ್ಫ್ಯುಸಿಯನಿಸ್ಟ್ ಸೇಂಥಿಲ್ ಮತ್ತೊಂದು ಅವಕಾಶದ ಮುನ್ಸೂಚನೆ ನೀಡಿದರು. ಅದು ನೇರ ಆಪರೇಷನ್ ಥಿಯೇಟರ್ ಹೊಕ್ಕು, ಒಬ್ಬ ಪ್ರಸಿದ್ಧ ಕಾರ್ಡಿಯಾಕ್ ಸರ್ಜನ್ ನಡೆಸುವ ಸರ್ಜರಿ ವಿಧಾನವನ್ನು ಪ್ರತ್ಯಕ್ಷ ವೀಕ್ಷಿಸುವ ಅವಕಾಶ!

ನಾನು ಮತ್ತು ಅಶೋಕ, ಕೆನಾನ್ 5ಡಿ–ಮಾರ್ಕ್4, ಐಫೋನ್ ಮತ್ತು ಒಪ್ಪೊ ಎಫ್7 ಸ್ಮಾರ್ಟ್‌ಫೋನ್ ಸಮೇತ ಆಪರೇಷನ್ ಜಗತ್ತಿಗೆ ಪ್ರವೇಶಿಸಿ ರೆಕಾರ್ಡ್ ಮಾಡಿಕೊಳ್ಳಲು ಸಜ್ಜಾದೆವು. ಸೇಂಥಿಲ್ ಆ ಅಪರೂಪದ ಸರ್ಜನ್‌ರನ್ನು ಭೇಟಿ ಮಾಡಿಸಲು ತಯಾರಿ ಮಾಡುತ್ತ, 'ಸರ್ಜನ್ ಇನ್ನೇನು ಬರ್ತಾರೆ' ಎನ್ನುತ್ತ ಕಾರ್ಡಿಯೊಥೊರಸಿಸ್ ಸರ್ಜರಿ ವಿಭಾಗವನ್ನೆಲ್ಲ ಪರಿಚಯಿಸಿದರು. ಸರ್ಜರಿಯಲ್ಲಿ ತಮ್ಮ ಕ್ಲಿನಿಕಲ್ ಪರ್ಫ್ಯುಸಿಯನಿಸ್ಟ್ ಪಾತ್ರದ ಬಗ್ಗೆಯೂ ವಿವರಿಸಿದರು. ಪೂರಕ ವಿಭಾಗಗಳನ್ನು ತೋರಿಸಿದರು. ಅಷ್ಟರಲ್ಲೇ ಸರ್ಜನ್ ಆಸ್ಪತ್ರೆಗೆ ಆಗಮಿಸಿದ ಮೆಸೇಜ್ ಬಂದಿತು. ಅವರ ಕೊಠಡಿ ಹೊಕ್ಕೆವು.

ಸೂಟು, ಬೂಟು, ಕನ್ನಡಕ ಹಾಕಿಕೊಂಡ ಹ್ಯಾಂಡ್‌ಸಮ್ ಸರ್ಜನ್ ಮಿಂಚಿನ ವೇಗದಲ್ಲಿ ತಮ್ಮ ಕೊಠಡಿ ಪ್ರವೇಶಿಸಿದರು. ಬಂದವರೇ 'ನಮಸ್ಕಾರ, ನಾನು ಡಾ. ಸತ್ಯಕಿ ನಂಬಾಲಾ' ಎಂದು ಪರಿಚಯಿಸಿಕೊಂಡರು. 'ಹೆಸರು ಭಿನ್ನವಾಗಿದೆ, ಅಲ್ವಾ!' ಎಂದು ನಕ್ಕರು. ನಾವು ಅಂದುಕೊಂಡಿದ್ದನ್ನು ಅವರು ಮುಂಚೆಯೇ ಗ್ರಹಿಸಿದ್ದರು.

ಫ್ಯಾಟ್ ಫ್ರೀ ಅಥ್ಲೀಟ್‌ನಂಥ ದೇಹ ಹೊತ್ತ ಡಾ. ಸತ್ಯಕಿ, ತುಟಿಯಂಚಿನಲ್ಲಿ ಮಂದಹಾಸದೊಂದಿಗೆ ಮಾತಿಗಿಳಿದರು. 'ಆಪರೇಷನ್ ಥಿಯೇಟರ್ (ಓಟಿ) ಸಮಯ ಸಮೀಪಿಸುತ್ತಿದೆ, ಸಂಕ್ಷಿಪ್ತದಲ್ಲೇ ಮಾತು ಮುಗಿಸುತ್ತೇನೆ' ಎಂದವರೇ